**ಅಸಲು ದಾವಾ ಸಂಖ್ಯೆ - 247/2014** ಡಿ.ಡಬ್ಲ್ಯೂ:-1

ದಿನಾಂಕಃ **18-03-2023** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು :- ವಾದಿ ಪರ ವಕೀಲರಿಂದ :-**

ಕುಂದೂರಪ್ಪ ನಮ್ಮ ಕುಟುಂಬದ ಮೂಲ ಪುರುಷ. ಸದರಿಯವರಿಗೆ ಯಲ್ಲಪ್ಪ ಮತ್ತು ಗೋಣಪ್ಪ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ಗೋಣಪ್ಪನ ಹೆಂಡತಿಯ ಹೆಸರು ಕಣ್ಣಮ್ಮ. ಯಲ್ಲಪ್ಪ ಮತ್ತು ಗೋಣಪ್ಪ ಮೃತರಾಗಿರುತ್ತಾರೆ. ಯಲ್ಲಪ್ಪರವರಿಗೆ ದಾಸಪ್ಪ ಯಾನೆ ದಾಸಣ್ಣ , ಪಕೀರಪ್ಪ, ಬಸಪ್ಪ ಮತ್ತು ಬಿಷ್ಟಪ್ಪ ಎಂಬ ನಾಲ್ಕು ಜನ ಮಕ್ಕಳು. ಗೋಣಪ್ಪನಿಗೆ ಮೂಕಪ್ಪ, ಪರಶುರಾಮಪ್ಪ, ಮಲ್ಲಪ್ಪ, ಹನುಮಂತಪ್ಪ ಮತ್ತು ಗೌರಮ್ಮ ಎಂಬ 5 ಜನ ಮಕ್ಕಳು. ಗೌರಮ್ಮ ವಾದಿಯ ತಾಯಿ ಎಂದರೆ ಸರಿ. ಗೋಣಪ್ಪನ ಹೆಂಡತಿಯಾದ ಕಣ್ಣಮ್ಮರವರಿಗೆ ಬಸಪ್ಪ ಯಾನೆ ಕುಂಟಬಸಪ್ಪ ಎಂಬ ತಮ್ಮ ಇದ್ದನು ಎಂದರೆ ಸರಿ. ಕಣ್ಣಮ್ಮ ತನ್ನ ಮಗಳಾದ ಗೌರಮ್ಮನನ್ನು ತನ್ನ ತಮ್ಮನಾದ ಬಸಪ್ಪರವರ ಜೊತೆ ಮದುವೆ ಮಾಡಿರುತ್ತಾರೆ ಎಂದರೆ ಸರಿ. ಕುಂಟಬಸಪ್ಪನಿಗೆ ವ್ಯವಸಾಯ ಮಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಗೌರಮ್ಮನನ್ನು ಕುಂಟಬಸಪ್ಪನಿಗೆ ಮದುವೆ ಮಾಡಿ, ಕೊಟ್ಟಗ ಜೀವನಾಂಶಕ್ಕಾಗಿ ಗೌರಮ್ಮನಿಗೆ ಆಸ್ತಿಯನ್ನು ಕೊಡುವುದಾಗಿ ಮಾತುಕತೆಯಾಗಿತ್ತು ಎಂದರೆ ಸರಿಯಲ್ಲ.

ನನಗೆ ಈಗ 60 ವರ್ಷ ವಯಸ್ಸಾಗಿದೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನನ್ನ ವಯಸ್ಸನ್ನು ಅಂದಾಜಿನ ಮೇಲೆ 45 ವರ್ಷ ವಯಸ್ಸೆಂದು ನನ್ನ ಅಣ್ಣ ನಮೂದಿಸಿರುತ್ತಾರೆ. ವಾದಿಯು ನನ್ನಗಿಂತ ಹಿರಿಯರು. ವಾದಿಗೆ ಸಿದ್ದಪ್ಪನೆಂಬ ಅಣ್ಣನಿದ್ದು ಆತ ವಾದಿಗಿಂತ 2 ವರ್ಷ ಹಿರಿಯರು ಎಂದರೆ ಸರಿಯಲ್ಲ. ಕುಂಟಬಸಪ್ಪ ಮತ್ತು ಗೌರಮ್ಮರವರ ವಿವಾಹದ ಸಂದರ್ಭದಲ್ಲಿ ಏನು ಮಾತುಕತೆಯಾಗಿತ್ತು ಎಂಬ ಬಗ್ಗೆ ನನಗೆ ಖುದ್ದು ಮಾಹಿತಿ ಇರುವುದಿಲ್ಲ. ಸದರಿ ಮಾತುಕತೆಯ ಬಗ್ಗೆ ನಾನು ನನ್ನ ಸಹೋದರರ ಬಳಿ ಕೇಳಿ ತಿಳಿದುಕೊಂಡಿರುವುದಿಲ್ಲ.

ಕುಂದೂರಪ್ಪರವರಿಗೆ ಸಾಲಬಾಳು ಗ್ರಾಮದಲ್ಲಿ ಸರ್ವೆ ನಂ.23, 9 ಎಕರೆ 21 ಗುಂಟೆ ಜಮೀನು ಇತ್ತು ಎಂದರೆ ಸರಿ. ಕುಂದೂರಪ್ಪನ ಪೌತಿಯಾದ ಬಳಿಕ ಸದರಿ ಜಮೀನಿನ ಖಾತೆಯು ದಾಸಪ್ಪ ಬಿನ್ ಯಲ್ಲಪ್ಪರವರ ಹೆಸರಿಗೆ ಪೌತಿ ಖಾತೆಯ ಮೂಲಕ ಬದಲಾವಣೆಯಾಗಿರುತ್ತದೆ ಎಂದರೆ ಸರಿ. 1959-60 ನೇ ಇಸವಿಯಲ್ಲಿ ಯಲ್ಲಪ್ಪ ಮತ್ತು ಗೋಣಪ್ಪನ ಮಕ್ಕಳು ಸರ್ವೆ ನಂ.23 ರ ಜಮೀನನ್ನು ಹಿಸ್ಸೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹಿಸ್ಸೆಯ ಪ್ರಕಾರ ಯಲ್ಲಪ್ಪ ಮತ್ತು ಗೋಣಪ್ಪನ ಮಕ್ಕಳ ಹೆಸರಿಗೆ ಜಂಟಿ ಖಾತೆಯಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಎಸ್.ಎಸ್.ಎಲ್.ಸಿ ಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ . ನಿಪಿ-8 ರ ಪ್ರಕಾರ ದಾಸಪ್ಪ ಬಿನ್ ಯಲ್ಲಪ್ಪರವರ ಹೆಸರಿನಲ್ಲಿ ಸರ್ವೆ ನಂ.23 ರ ಖಾತೆ ಇದೆ ಎಂದರೆ ಸರಿ. ನಿಪಿ-10 ರಲ್ಲಿ 4 ಎಕರೆ 30 ಗುಂಟೆ ವಿಸ್ತೀರ್ಣ ಹನುಮಂತಪ್ಪ. ಕೆ ರವರ ಹೆಸರಿನಲ್ಲಿ ಇದ್ದು, ಅವರ ಹೆಸರಿನ ಕೆಳಗಡೆ ದಾಸಪ್ಪ , ಪಕೀರಪ್ಪ, ಬಸಪ್ಪ ಮತ್ತು ಬಿಷ್ಟಪ್ಪ ರವರು ಹೆಸರುಗಳು ನಮೂದಾಗಿದೆ. ನಿಪಿ-11 ರಲ್ಲಿ 1959-60 ನೇ ಸಾಲಿನಲ್ಲಿ ದಾಸಪ್ಪ ಬಿನ್ ಯಲ್ಲಪ್ಪ ಸ್ವಂತ ಎಂದು 4 ಎಕರೆ 31 ಗುಂಟೆ ವಿಸ್ತೀರ್ಣ ನಮೂದಾಗಿದೆ ಎಂದರೆ ಸರಿ. ಅದರ ಕೆಳಗಡೆ ದಾಸಪ್ಪ, ಪಕೀರಪ್ಪ, ಬಸಪ್ಪ ಮತ್ತು ಬಿಷ್ಟಪ್ಪ ಎಂಬ ಹೆಸರುಗಳು ನಮೂದಾಗಿದೆ ಎಂದರೆ ಸರಿ. ಅದರ ಕೆಳಗಡೆ 4 ಎಕರೆ 30 ಗುಂಟೆ ಕುಂಟಬಸಪ್ಪರವರ ಹೆಸರಿನಲ್ಲಿ ಇದೆ ಎಂದರೆ ಸರಿ. ನಿಪಿ-12 ರಲ್ಲಿ ಸರ್ವೆ ನಂ.23 ರಲ್ಲಿ 4 ಎಕರೆ 30 ಗುಂಟೆ ಕುಂದೂರಪ್ಪರ ಹನುಮಂತಪ್ಪ ರವರ ಹೆಸರಿನಲ್ಲಿ 4 ಎಕರೆ 30 ಗುಂಟೆ ಉಳಿದ 4 ಎಕರೆ 31 ಗುಂಟೆ ಜಮೀನು ದಾಸಪ್ಪ, ಪಕೀರಪ್ಪ, ಬಸಪ್ಪ ಮತ್ತು ಬಿಷ್ಟಪ್ಪ ರವರ ಹೆಸರಿನಲ್ಲಿ ನಮೂದಾಗಿದೆ ಎಂದರೆ ಸರಿ. ಸಾಮಾನ್ಯವಾಗಿ ತಾಲ್ಲೂಕು ಕಚೇರಿಗೆ ಹೋಗಿ ವಿಭಾಗ ಪತ್ರದಂತೆ ಖಾತೆ ಬದಲಾವಣೆ ಮಾಡಲು ಕೋರಿಕೊಂಡಾಗ ಅವರು ಖಾತೆ ಬದಲಾವಣೆ ಮಾಡುತ್ತಾರೆ ಎಂದರೆ ಸರಿ. ನಿಪಿ-11 ಮತ್ತು 12 ದಾಖಲೆಗಳಲ್ಲಿ ವಿವರಗಳನ್ನು ನಮೂದು ಮಾಡಿದ ಸಂದರ್ಭದಲ್ಲಿ ನಾನು ಜನಿಸಿರುವುದಿಲ್ಲ. ನಿಪಿ-11 ಮತ್ತು 12 ದಾಖಲೆಗಳಲ್ಲಿ ಯಲ್ಲಪ್ಪ ಮತ್ತು ಗೋಣಪ್ಪರವರ ಮಕ್ಕಳ ನಡುವೆ ವಿಭಾಗ ಆಗಿರುವ ವಿಚಾರ ನನಗೆ ಗೊತ್ತಿಲ್ಲ. ಸರ್ವೆ ನಂ.23 ನ್ನು ಹೊರತುಪಡಿಸಿ, ಕುಂದೂರಪ್ಪನಿಗೆ ಸರ್ವೆ ನಂ. 22 ಮತ್ತು 68 ರಲ್ಲಿ ಜಮೀನುಗಳು ಇದ್ದವು.

ಗೋಣಪ್ಪ ಮತ್ತು ಯಲ್ಲಪ್ಪರವರ ಮಕ್ಕಳು ತಮ್ಮ ಹಿಸ್ಸೆಗೆ ಬಂದಿದ್ದಂತಹ ಜಮೀನುಗಳ ಪೈಕಿ ಕೆಲವು ಜಮೀನುಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ . ದಾಸಪ್ಪ ಮತ್ತು ಬಸಪ್ಪ ಹಿಸ್ಸೆಗೆ ಸರ್ವೆ ನಂ.23 ರಲ್ಲಿ 1 ಎಕರೆ 6 ಗುಂಟೆ, ಪಕೀಲರಪ್ಪನಿಗೆ ಮತ್ತು ಬಿಷ್ಟಪ್ಪನಿಗೆ 1 ಎಕರೆ 5 ಗುಂಟೆ ಹೋಗಿರುತ್ತದೆ ಎಂದರೆ ಸರಿ. ಗೋಣಪ್ಪನ ಮಕ್ಕಳು ತಮ್ಮ ಹಿಸ್ಸೆಗೆ ಬಂದಿದ್ದಂತಹ 4 ಎಕರೆ 30 ಗುಂಟೆ ಜಮೀನಿನ ಪೈಕಿ 3 ಎಕರೆ 10 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಖರೀದಿದಾರರು ಸದರಿ ಜಮೀನಿನ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿ. ಗೋಣಪ್ಪ ಮಕ್ಕಳು ಉಳಿಕೆ 1 ಎಕರೆ 29 ಗುಂಟೆ ಜಮೀನನ್ನು ಅವರ ಮಗಳಾದ ಗೌರಮ್ಮರವರ ಜೀವನಾಂಶಕ್ಕಾಗಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅಂದಿನಿಂದ 1 ಎಕರೆ 29 ಗುಂಟೆ ಜಮೀನು ಗೌರಮ್ಮರವರ ಜೀವನಾಂಶಕ್ಕಾಗಿ ನೀಡಲಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ 1 ಎಕರೆ 29 ಗುಂಟೆ ಜಮೀನಿನ ಪೂರ್ವಕ್ಕೆ 3 ಎಕರೆ 10 ಗುಂಟೆ ಜಮೀನು ಇದೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಪಶ್ಚಿಮಕ್ಕೆ ಗುಡೆಮನೇರ ಭೋಜಪ್ಪ, ಹೊಸಮನೆ ಶೇಖರಪ್ಪ, ಕಂಕನಹಳ್ಳಿ ಪಾರ್ವತಮ್ಮ ಮತ್ತು ಕರೆಮನೆಯರ ಈಶ್ವರಪ್ಪರವರ ಜಮೀನು ಇದೆ ಎಂದರೆ ಇರಬಹುದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಉತ್ತರ ದಿಕ್ಕಿಗೆ ವಾದಿಗೆ ಸೇರಿದ ಜಮೀನು ಇದೆ ಎಂದರೆ ಸರಿ. ದಕ್ಷಿಣಕ್ಕೆ ಗುಳಗಿ ಮಂಜಪ್ಪರವರ ಜಮೀನು ಇದೆ ಎಂದರೆ ಸರಿ. ಸಾಮಾನ್ಯವಾಗಿ ಜಮೀನನ್ನು ಖರೀದಿ ಮಾಡಿದ ಸಂದರ್ಭದಲ್ಲಿ ಆ ಜಮೀನಿನ ಚೆಕ್ಕು ಬಂಧಿಯನ್ನು ನಮೂದಿಸುವಾಗ, ಅಜುಬಾಜು ಜಮೀನುಗಳಲ್ಲಿ ಸಾಗುವಳಿ ಮಾಡುತ್ತಿರುವವರ ಹೆಸರುಗಳನ್ನು ನಮೂದಿಸುತ್ತಾರೆ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.**

**ಓ. ಹೇ. ಕೇ. ಸ. ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಹೊನ್ನಾಳಿ.**